77

Guidelines for biological parks, zoo, sanctuary, and national parks

1. General considerations
    1.1. Taking cognisance of the infrastructure, space, facility, manpower etc. to maintain physical distancing at all times, authorities shall estimate maximum allowable number of visitors for the day. Accordingly issue tokens for staggered entry of visitors for the day
    1.2. Public notifications shall be issued regarding the staggered entry of the visitors to park for various events along with activity schedule
    1.3. All the visitors and staff shall always compulsorily wear a face mask
    1.4. All safari vehicles shall have occupancy of not more than 50% for maintaining the physical distancing of more than 1 meter
    1.5. A nodal person shall be identified and trained to coordinate the COVID-19 activities and liaise with health department from time to time

2. Screening at the entry point

    2.1 A person shall be designated and trained to undertake screening for all staff and visitors by holding the thermal scanner from 3 to 15 cm away from the forehead. If temperature is ≥37.5 °C (≥99.5°F) such employees or visitors shall not be allowed inside
    2.2 If any staff or visitor have fever, cough, cold, throat pain or breathing difficulty they shall not be allowed inside and referred to nearest hospital/fever clinic or dial Apthamitra helpline 14410
    2.3 Ensure adequate supplies of alcohol-based hand rub and availability of soap and water.
    2.4 Ensure adequate supplies of tissue paper and closed bins for appropriate waste disposal.

3. Inside the park

    3.1 Regular CCTV surveillance / security monitoring shall be done to prevent overcrowding and ensure physical distancing among visitors
    3.2 There shall be physical barrier ensuring more than 1 meter distance between the animals and visitors at all times
    3.3 Liquid soaps and water shall be made available in all the rest rooms and wash basins
    3.4 Visitors are discouraged from unnecessary gathering in common areas. Play areas for children/ adults shall be closed and no visitors to be allowed.
    3.5 Spitting in the public places is strictly prohibited
    3.6 The authority shall regularly organize awareness regarding COVID-19 to the employees and visitors through training and IEC activities
    3.7 Do's and Don'ts about COVID-19 shall be displayed at appropriate place



Scanned by CamScanner

4. **Responsibility of the visitors/ staff**

4.1 Visitors/staff shall follow hand hygiene frequently with soap and water or alcohol-based hand-sanitizer **(Annexure 1)**

4.2 Visitors /staff shall maintain cough etiquette; they are advised to cover their mouth and nose with a tissue paper/handkerchief when they sneeze/cough. Used tissue papers shall be disposed in closed dustbins. If they do not have tissue paper/hand kerchief they should cover mouth and nose by the elbow

4.3 Maintaining a physical distance of more than 1 meter shall be made mandatory within the group and no group activities shall be allowed

4.4 All the staff/visitors shall wear an appropriate face mask.

5. **Food hygiene in canteen/restaurant/ cafeteria/etc.**

5.1 Kitchen shall be ventilated & cleanliness must be maintained. All perishable items used in food preparation shall be washed well before use.

5.2 All food-handlers shall wear facemask, hand gloves, head-cap and apron. The mask should cover nose and mouth properly.

5.3 Frequent hand-wash with soap and water or alcohol-based hand-rub shall be practiced.

5.4 Food handlers shall maintain cough etiquette

5.5 Stagger meal-time/ lunch-breaks to ensure physical distance is maintained

6. **Cleaning practices**

6.1 All frequently touched surfaces (e.g., light switches, door handles, phones, etc.) and equipment's shall be disinfected using Lysol IP (50% Cresol and 50% Liquid soap) or 1% Sodium Hypochlorite solution (see **Annexure – 2** for preparation) daily and when soiled

6.2 Accommodations and bathrooms/ urinals shall be disinfected on a daily basis, based on MoHFW guidelines-
https://www.mohfw.gov.in/pdf/Guidelinesondisinfectionofcommonpublicplacesincludingoffices.pdf

6.3 All the vehicles shall be disinfected with 1% sodium hypochlorite solution daily evening


**All the orders/ guidelines/ circulars /SOPs issued from Government of India and Government of Karnataka from time to time are applicable**

**Commissioner,**
**H&FWS, Bengaluru**



Scanned by CamScanner

Annexure 1: Hand hygiene






Scanned by CamScanner

Annexure 2: Guidelines for Preparation of 1% sodium hypochlorite solution and Lysol

| Product | Available chlorine | 1percent |
|---|---|---|
| Sodium hypochlorite – liquid bleach | 3.5% | 1-part bleach to 2.5 parts water |
| | | |
| Sodium hypochlorite - liquid | 5% | 1-part bleach to 4 parts water |
| NaDCC (sodium dichloroisocyanurate) powder | 60% | 17 grams to 1-liter water |
| NaDCC (1.5 g/ tablet) - tablets | 60% | 11 tablets to 1-liter water |
| Chloramine - powder | 25% | 80 g to 1-liter water |
| Bleaching powder | 70% | 7g g to 1-liter water |
| Lysol for disinfection<br>Lysol IP (50% Cresol and 50% Liquid soap) | | 2.5% Lysol (1 litre of Lysol in 19 litres of water) |
| Any other | As per manufacturer's Instructions | |

**For COVID related queries please contact:**

Helpline numbers 9745697456, 080-46848600, 080-66692000 & 14410

https://covid19.karnataka.gov.in/

Download Aarogya setu and Apthamitra apps from below link

https://covid19.karnataka.gov.in/new-page/Mobile%20Applications/en

For training videos please visit Jagruti Karnataka

https://www.youtube.com/channel/UC-jJ_NNw89m8_OocGo1Zfcg



Scanned by CamScanner

# ಕರ್ನಾಟಕ ಮೃಗಾಲಯ ಪ್ರಾಧಿಕಾರ

(ಕರ್ನಾಟಕ ಸರ್ಕಾರದ ಅಧೀನದಲ್ಲಿ)

ಸದಸ್ಯ ಕಾರ್ಯದರ್ಶಿಯವರ ಕಛೇರಿ,
ಶ್ರೀ ಚಾಮರಾಜೇಂದ್ರ ಮೃಗಾಲಯ ಆವರಣ,
ಮೈಸೂರು - 570 010

☎ ಫೋ : 0821- 2432881
ಫ್ಯಾಕ್ಸ್: 0821-2431772
ಫ್ಯಾಕ್ಸ್: 0821-2563494
ಇ-ಮೇಲ್ : ccfmszak@gmail.com

ಸಂಖ್ಯೆ:ಎ3/ಜೆಡ್.ಎ.ಕೆ/ಜಿ.ಇ.ಎನ್/ಸಿಆರ್-19/2011-12 ದಿನಾಂಕ: 06-06-2020

## ಸುತ್ತೋಲೆ

**ವಿಷಯ:** ಕರ್ನಾಟಕ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಗೊಳಪಡುವ ಎಲ್ಲಾ ಮೃಗಾಲಯಗಳನ್ನು ವೀಕ್ಷಕರ ವೀಕ್ಷಣೆಗೆ ತೆರೆಯಲು ಅನುಮತಿಸುವ ಬಗ್ಗೆ.

**ಉಲ್ಲೇಖ:** 1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ವಿಪತ್ತು, ನಿರ್ವಹಣೆ, ಭೂಮಿ ಮತ್ತು ಯುಪಿ.ಓ.ಆರ್) ಕಂದಾಯ ಇಲಾಖೆ, ಬೆಂಗಳೂರು, ಇವರ ದಿನಾಂಕ: 4-6-2020 ರ ಅನಧಿಕೃತ ಟಿಪ್ಪಣಿ ಸಂ. ಕಂ.ಇ.158/ಟಿ.ಎನ್.ಆರ್ /2020 (ಭಾ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು, ಇವರಿಗೆ ವಿಳಾಸಿಸಿರುವುದು.

2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು, ಇವರ ದಿನಾಂಕ: 6-6-2020 ಸಂ. ಅಪಜೀ/44/ಎಫ್.ಪಿ.ಸಿ/2020 ರ ಪತ್ರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು, ಇವರಿಗೆ ವಿಳಾಸಿಸಿ, ಈ ಕಛೇರಿಗೆ ಪ್ರತಿ ಕಳುಹಿಸಿರುವುದು.

3) ಈ ಕಛೇರಿಯ ಇದೇ ಸಮ ಸಂಖ್ಯೆ ದಿನಾಂಕ: 16-05-2020 ರ ಪತ್ರ ಕಾರ್ಯನಿರ್ವಾಹಕ ನಿರ್ದೇಶಕರು, ಮೈಸೂರು / ಬಬಪಾ, ಬೆಂಗಳೂರು ಇವರಿಗೆ ವಿಳಾಸಿಸಿ, ಉಳಿದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಪ್ರತಿ ಕಳುಹಿಸಿರುವುದು.

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (3) ರ ಪತ್ರದ ಮುಂದುವರಿಕೆಯಾಗಿ, ಕೋವಿಡ್-19 ರ ಸೋಂಕು ಹರಡುವಿಕೆಯನ್ನು ನಿಯಂತ್ರಿಸುವ ಸಲುವಾಗಿ ಕೇಂದ್ರ-ರಾಜ್ಯ ಸರ್ಕಾರಗಳ ನಿರ್ದೇಶನದನ್ವಯ ಕರ್ನಾಟಕ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಯ ಎಲ್ಲಾ ಮೃಗಾಲಯಗಳನ್ನು ದಿನಾಂಕ: 15-03-2020 ರಿಂದ ವೀಕ್ಷಕರ ವೀಕ್ಷಣೆಗೆ ಮುಚ್ಚಲ್ಪಟ್ಟಿರುತ್ತದೆ. ಲಾಕ್ ಡೌನ್ ಸಡಿಲಿಕೆಯ ಹಿನ್ನೆಲೆಯಲ್ಲಿ ಮೃಗಾಲಯಗಳನ್ನು ವೀಕ್ಷಕರ ವೀಕ್ಷಣೆಗೆ ಪುನರಾರಂಭಿಸುವ ಬಗ್ಗೆ ಅನುಮತಿ ಕೋರಿ, ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ ಮೇರೆಗೆ, ಉಲ್ಲೇಖಿತ (1) ರ ಪತ್ರದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ವಿಪತ್ತು, ನಿರ್ವಹಣೆ, ಭೂಮಿ ಮತ್ತು ಯುಪಿ.ಓ.ಆರ್) ಕಂದಾಯ ಇಲಾಖೆ, ಬೆಂಗಳೂರು, ಇವರು ಕರ್ನಾಟಕ ರಾಜ್ಯದಲ್ಲಿನ ಜೈವಿಕ ಉದ್ಯಾನವನಗಳು, ಮೃಗಾಲಯಗಳು, ಪಕ್ಷಿಧಾಮಗಳು ಮತ್ತು ರಾಷ್ಟ್ರೀಯ ಉದ್ಯಾನವನಗಳನ್ನು ಸಾರ್ವಜನಿಕರ ವೀಕ್ಷಣೆಗೆ, ಕೋವಿಡ್-19 ರ ನಿಯಂತ್ರಣ ಮಾರ್ಗಸೂಚಿಯ ಎಲ್ಲಾ ಸೂಚನೆಗಳನ್ನು ಹಾಗೂ ಆರೋಗ್ಯ ಮತ್ತು ಕಲ್ಯಾಣ ಇಲಾಖೆಯ ಕಾಲಕಾಲಕ್ಕೆ ನೀಡುವ ಮಾರ್ಗಸೂಚಿ/ಎಸ್.ಓ.ಪಿ ಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವ ಷರತ್ತುಗಳೊಂದಿಗೆ ಪ್ರಾರಂಭಿಸಬಹುದಾಗಿದೆ ಎಂದು ಅಭಿಪ್ರಾಯ ನೀಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪರಿಣಿತರ ಸಮಿತಿಯು ಪರಿಶೋಧಿಸಿ, ನೀಡಿದ ಅಂತಿಮ ಮಾರ್ಗಸೂಚಿಯ ಪ್ರತಿಯೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅಪಜೀ ಇಲಾಖೆ, ಬೆಂಗಳೂರು, ಇವರಿಗೆ ಇಲಾಖೆ ಹಂತದಲ್ಲಿಯೇ ಮಾರ್ಗಸೂಚಿ ಹೊರಡಿಸುವಂತೆ ಸೂಚಿಸಿರುತ್ತಾರೆ. ಉಲ್ಲೇಖಿತ (1) ರ ಪತ್ರ ಹಾಗೂ ಮಾರ್ಗಸೂಚಿಯ ಪ್ರತಿಯನ್ನು ಇದರೊಂದಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕೆ ಕಳುಹಿಸಿದೆ.

ಉಲ್ಲೇಖಿತ (2) ರ ಪತ್ರದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು, ಇವರು ಮಾರ್ಗಸೂಚಿಗಳ ಕಟ್ಟು ನಿಟ್ಟಿನ ಪಾಲನೆಯೊಂದಿಗೆ

Scanned by CamScanner

ಮೃಗಾಲಯಗಳ ಪುನರಾರಂಭಕ್ಕೆ ಕ್ರಮ ಕೈಗೊಳ್ಳಲು ಅನುಮತಿ ನೀಡಿರುತ್ತದೆ. ಉಲ್ಲೇಖಿತ (2) ರ ಪತ್ರ ಹಾಗೂ ಅಡಕಗಳ ಪ್ರತಿಗಳನ್ನು ಇದರೊಂದಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕೆ ಕಳುಹಿಸಿದೆ.

ಉಲ್ಲೇಖಿತ (3) ರ ಪತ್ರದಲ್ಲಿ ಮೃಗಾಲಯಗಳ ಪುನರಾರಂಭಕ್ಕೆ ಅನುಮತಿ ದೊರೆತ ಸಂದರ್ಭ ಕೋವಿಡ್-19 ರ ಸೋಂಕು ಹರಡುವಿಕೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಮೃಗಾಲಯಕ್ಕೆ ಬರುವ ವೀಕ್ಷಕರ, ಅಧಿಕಾರಿ / ನೌಕರರ, ಹಾಗೂ ಪ್ರಾಣಿ / ಪಕ್ಷಿಗಳ ಹಿತದೃಷ್ಟಿಯಿಂದ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕಾರ್ಯವಿಧಾನಗಳನ್ನು (ಎಸ್.ಓ.ಪಿ) ಕಳುಹಿಸಿ, ಅದರಂತೆ ಕ್ರಮಕೈಗೊಳ್ಳುವ ಬಗ್ಗೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಈಗಾಗಲೇ ಸೂಚಿಸಲಾಗಿರುತ್ತದೆ.

ಆದ್ದರಿಂದ, ಉಲ್ಲೇಖ (1) ಮತ್ತು (2) ರ ಸರ್ಕಾರದ ಪತ್ರಗಳಲ್ಲಿನ ನಿರ್ದೇಶನದಂತೆ, ಮೃಗಾಲಯಗಳನ್ನು ವೀಕ್ಷಕರ ವೀಕ್ಷಣೆಗೆ ದಿನಾಂಕ: 08-06-2020 ರಿಂದ ತೆರೆಯಲು ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂಬ ಷರತ್ತಿನೊಂದಿಗೆ ಅನುಮತಿ ನೀಡಲಾಗಿದೆ.

1) ಕೋವಿಡ್-19 ರ ನಿಯಂತ್ರಣ ಮಾರ್ಗಸೂಚಿಯ ಎಲ್ಲಾ ಸೂಚನೆಗಳನ್ನು ಪಾಲಿಸತಕ್ಕದ್ದು.
2) ರಾಜ್ಯ ಆರೋಗ್ಯ ಮತ್ತು ಕುಂಟುಂಬ ಕಲ್ಯಾಣ ಇಲಾಖೆಯ ಪರಿಣಿತರ ಸಮಿತಿಯು ಪರಿಶೋಧಿಸಿ ಅಂತಿಮಗೊಳಿಸಿ ನೀಡಿರುವ ಮಾರ್ಗಸೂಚಿಯ ಎಲ್ಲಾ ಸೂಚನೆಗಳನ್ನು ಪಾಲಿಸತಕ್ಕದ್ದು.
3) ಉಲ್ಲೇಖಿತ (3) ರ ಪತ್ರದೊಂದಿಗೆ ಈಗಾಗಲೇ ಕಳುಹಿಸಿರುವ ಕಾರ್ಯವಿಧಾನಗಳನ್ನು (ಎಸ್.ಓ.ಪಿ) ಪಾಲಿಸತಕ್ಕದ್ದು.
4) ಕೋವಿಡ್-19 ರ ಸೋಂಕು ಹರಡುವಿಕೆಯ ನಿಯಂತ್ರಣ ಸಂಬಂಧ ಕಾಲಕಾಲಕ್ಕೆ ನೀಡಬಹುದಾದ ಎಲ್ಲಾ ಸೂಚನೆಗಳನ್ನು ಪಾಲಿಸತಕ್ಕದ್ದು.
5) ಮೃಗಾಲಯಕ್ಕೆ ಬರುವ ವೀಕ್ಷಕರಲ್ಲಿ ಯಾರಿಗಾದರೂ ಹಾಗೂ ಮೃಗಾಲಯದ ಸಿಬ್ಬಂದಿಗಳಲ್ಲಿ ಕೋವಿಡ್-19 ರ ಸೋಂಕಿನ ಶಂಕೆ ಕಂಡು ಬಂದಲ್ಲಿ ಕೂಡಲೇ ಜಿಲ್ಲಾಡಳಿತದ ಗಮನಕ್ಕೆ ತಂದು ಅಗತ್ಯ ಮುಂದಿನ ಕ್ರಮವನ್ನು ನಿಯಮಾನುಸಾರ ನಿಮ್ಮ ಹಂತದಲ್ಲೇ ಕೈಗೊಳ್ಳತಕ್ಕದ್ದು.
6) ಜಿಲ್ಲಾಡಳಿತದೊಂದಿಗೆ ನಿರಂತರ ಸಂಪರ್ಕವನ್ನು ಇಟ್ಟುಕೊಂಡು ದೈನಂದಿನ ವಿದ್ಯಮಾನಗಳ ಬಗ್ಗೆ ಜಿಲ್ಲಾಡಳಿತಕ್ಕೆ ಹಾಗೂ ಈ ಕಛೇರಿಗೆ ಮಾಹಿತಿ ನೀಡತಕ್ಕದ್ದು.
7) ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಹಾಗೂ ಪ್ರತಿಯೊಬ್ಬರೂ ಕಡ್ಡಾಯವಾಗಿ ಮಾಸ್ಕ್ ಧರಿಸುವುದರ ಬಗ್ಗೆ ನಿಗಾವಹಿಸತಕ್ಕದ್ದು.
8) ಮೃಗಾಲಯದ ಆವರಣದೊಳಗೆ ರೆಸ್ಟೋರೆಂಟ್, ಮಳಿಗೆ ಇತ್ಯಾದಿಗಳನ್ನು ನಿರ್ವಹಿಸುತ್ತಿರುವವರಿಗೆ ಈ ಬಗ್ಗೆ ಅಗತ್ಯ ಸೂಚನೆಗಳನ್ನು ನೀಡಿ, ಮಾರ್ಗಸೂಚಿಗಳ ಪಾಲನೆ ಮಾಡುವ ಬಗ್ಗೆ ನಿಗಾವಹಿಸತಕ್ಕದ್ದು.
9) ಮೃಗಾಲಯಗಳ ಆಡಳಿತಾತ್ಮಕ ಚಾಲ್ತಿ ನಿಯಮಗಳನ್ನು ಪಾಲಿಸತಕ್ಕದ್ದು.

6/6

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಮತ್ತು ಸದಸ್ಯ ಕಾರ್ಯದರ್ಶಿ
ಕರ್ನಾಟಕ ಮೃಗಾಲಯ ಪ್ರಾಧಿಕಾರ

ಗೆ,

**ಕಾರ್ಯನಿರ್ವಾಹಕ ನಿರ್ದೇಶಕರು-**

ಬಬಪಾ, ಬೆಂಗಳೂರು /ಮೈಸೂರು ಮೃಗಾಲಯ, ಮೈಸೂರು /
ತ್ಯಾವರೆಕೊಪ್ಪ, ಶಿವಮೊಗ್ಗ / ಚಿತ್ರದುರ್ಗ ವಿಭಾಗ, ಚಿತ್ರದುರ್ಗ
ದಾವಣಗೆರೆ / ಗದಗ / ಹಂಪಿ(ಕಮಲಾಪುರ) /
ಕಲಬುರ್ಗಿ / ಬೆಳಗಾವಿ. - ಇವರುಗಳಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕೆ ಕಳುಹಿಸಿದೆ.

Scanned by CamScanner

1) ಪ್ರತಿಯನ್ನು ಗೌರವಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು, ಇವರಿಗೆ ಸೂಕ್ತ ಅವಗಾಹನೆಗೆ ಸಲ್ಲಿಸಿದೆ.
2) ಪ್ರತಿಯನ್ನು ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು), ಅರಣ್ಯಭವನ, ಬೆಂಗಳೂರು, ಇವರಿಗೆ ಸೂಕ್ತ ಅವಗಾಹನೆಗೆ ಸಲ್ಲಿಸಿದೆ.
3) ಪ್ರತಿಯನ್ನು ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಅರಣ್ಯಭವನ, ಬೆಂಗಳೂರು, ಇವರಿಗೆ ಸೂಕ್ತ ಅವಗಾಹನೆಗೆ ಸಲ್ಲಿಸಿದೆ.

Scanned by CamScanner

82

ಕರ್ನಾಟಕ ಸರ್ಕಾರ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

**ಜೈವಿಕ ಉದ್ಯಾನ ವನಗಳು ಮೃಗಾಲಯಗಳು, ಪಕ್ಷಿಧಾಮಗಳು ಮತ್ತು ರಾಷ್ಟ್ರೀಯ ಉದ್ಯಾನವನಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು.**

1. **ಸಾಮಾನ್ಯವಾಗಿ ಪರಿಗಣಿಸುವ ಮಾಹಿತಿಗಳು:**

1.1.ಮೂಲಭೂತ ಸೌಕರ್ಯಗಳು, ಸ್ಥಳಾವಕಾಶ ,ಸೌಕರ್ಯಗಳು ಮಾನವ ಸಂಪನ್ಮೂಲ ಮತ್ತು ಇನ್ನಿತರ ಸೌಲಭ್ಯಗಳನ್ನು ಪರಿಗಣಿಸಿ ಎಲ್ಲಾ ಸಂದರ್ಭದಲ್ಲೂ ಭೌತಿಕ ಅಂತರವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಪ್ರತಿ ದಿವಸ ಎಷ್ಟು ಜನ ಸಂದರ್ಶಕರಿಗೆ ವೀಕ್ಷಣೆಗೆ ಅವಕಾಶ ನೀಡಬಹುದರ ಬಗ್ಗೆ ಅಂದಾಜು ಮಾಡುವುದು, ಇದರಂತೆ ಪ್ರವೇಶಿಸಲು ಟೋಕನ್ನಳನ್ನು ವಿತರಣೆ ಮಾಡುವುದು.

1.2. ವಿವಿಧ ಸಂಭ್ರಭಗಳಲ್ಲಿ ಸಂದರ್ಶಕರ ಪ್ರವೇಶಕ್ಕಾಗಿ ಉದ್ಯಾನವನ್ನ ಚಟುವಟಿಕೆಗಳ ಬಗ್ಗೆ ಸಾರ್ವಜನಿಕ ಅಧಿಸೂಚನೆಯನ್ನು ಹೊರಡಿಸಬೇಕು.

1.3.ಸಂದರ್ಶಕರು ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಮುಖಗವಸನ್ನು ಧರಿಸಿರಬೇಕು.

1.4. ಒಂದು ಮೀಟರ್ ಗಿಂತ ಹೆಚ್ಚು ದೈಹಿಕ ಅಂತರವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಸಫಾರಿ ವಾಹನಗಳ ಆಸನಗಳಲ್ಲಿ ಶೇ.50 ಕ್ಕಿಂತ ಹೆಚ್ಚು ಆಸನಗಳಿಗೆ ಅವಕಾಶ ನೀಡಬಾರದು.

1.5. ಕೋವಿಡ್-19ರ ಚಟುವಟಿಕೆಗಳು ಮತ್ತು ಆರೋಗ್ಯ ಇಲಾಖೆಯ ಜೊತೆ ಕಾಲಕಾಲಕ್ಕೆ ಸಮನ್ವಯ ಮಾಡಲು ಒಬ್ಬ ನೋಡಲ್ ವ್ಯಕ್ತಿಯನ್ನು ಗುರುತಿಸಿ ತರಬೇತಿ ನೀಡುವುದು.

2. **ಪ್ರವೇಶ ದ್ವಾರದಲ್ಲಿ ತಪಾಸಣೆ**

**2.1** ಎಲ್ಲಾ ವ್ಯಕ್ತಿಗಳ ಮತ್ತು ಸಂದರ್ಶಕರನ್ನು ಥರ್ಮಲ್ ಸ್ಕ್ಯಾನಿಂಗ್ ಮುಖೇನ ತಪಾಸಣೆ ಮಾಡಲು ಒಬ್ಬ ವ್ಯಕ್ತಿಯನ್ನು ಗುರುತಿಸಿ ತರಬೇತಿಯನ್ನು ನೀಡುವುದು. ಸಂದರ್ಶಕರು ಮತ್ತು ಸಿಬ್ಬಂದಿಗಳ ದೇಹದ ಉಷ್ಣತೆಯು $37^0$ ಸೆಂಟಿಗ್ರೇಡ್ ಮತ್ತು ಅದಕ್ಕಿಂತ ಹೆಚ್ಚಿದ್ದರೆ $99.5^0$ಫ್ಯಾರನ್ ಹೀಟ್ ಅಥವಾ ಅದಕ್ಕಿಂತ ಹೆಚ್ಚಿದ್ದರೆ ಅಂತಹ ವ್ಯಕ್ತಿಗಳಿಗೆ ಪ್ರವೇಶವನ್ನು ನಿರಾಕರಿಸಬೇಕು.

**2.2** ಯಾವುದೇ ಸಿಬ್ಬಂದಿ ಅಥವಾ ಸಂದರ್ಶಕರಿಗೆ ಜ್ವರ, ಕೆಮ್ಮು, ಶೀತ, ಗಂಟಲು ನೋವು ಅಥವಾ ಉಸಿರಾಟದ ತೊಂದರೆಯಿದ್ದರೆ ಅಂತಹ ವ್ಯಕ್ತಿಗಳಿಗೆ ಪ್ರವೇಶ ನಿರಾಕರಿಸಬೇಕು ಮತ್ತು ಹತ್ತಿರದ ಆಸ್ಪತ್ರೆ/ ಜ್ವರ ಚಿಕಿತ್ಸಾಲಯಗಳಿಗೆ ಶಿಫಾರಸು ಮಾಡಬೇಕು ಅಥವಾ ಆಪ್ತಮಿತ್ರ ಸಹಾಯವಾಣಿ 14410 ಕ್ಕೆ ಕರೆ ಮಾಡುವುದು.

**2.3** ಸಾಕಷ್ಟು ಪ್ರಮಾಣದಲ್ಲಿ ಮದ್ಯಸಾರಯುಕ್ತ ಸ್ಯಾನಿಟೈಸರ್ ನ ಪೂರೈಕೆ ಮತ್ತು ನೀರು ಮತ್ತು ಸೋಪಿನ ವ್ಯವಸ್ಥೆಯನ್ನು ಮಾಡಬೇಕು.

**2.4** ಸಾಕಷ್ಟು ಪ್ರಮಾಣದಲ್ಲಿ ಕೈ ಒರಸುವ ಕಾಗದಗಳ ಪೂರೈಕೆ ಮತ್ತು ತ್ಯಾಜ್ಯ ವಿಲೇವಾರಿಗೆ ಸೂಕ್ತವಾದ ಮುಚ್ಚಿದ ತೊಟ್ಟಿಗಳ ವ್ಯವಸ್ಥೆ ಮಾಡಬೇಕು.



2

Scanned by CamScanner

3. ಉದ್ಯಾನವನದ ಒಳಗಡೆ:

3.1. ಸಂದರ್ಶಕರ ನಡುವೆ ದೈಹಿಕ ಅಂತರವನ್ನು ಖಾತ್ರಿಪಡಿಸಲು ಹೆಚ್ಚು ಜನಸಂದಣಿಯನ್ನು ತಡೆಯಲು ನಿರಂತರವಾದ ಸಿಸಿಟಿವಿ ಕಣ್ಗಾವಲು ಮತ್ತು ಭದ್ರತಾ ಮೇಲ್ವಿಚಾರಣೆಯ ವ್ಯವಸಸ್ಥೆಯನ್ನು ಮಾಡಬೇಕು.

3.2 ಎಲ್ಲಾ ಸಂಧರ್ಭಗಳಲ್ಲಿ ಪ್ರಾಣಿಗಳು ಮತ್ತು ಸಂದರ್ಶಕರ ನಡುವೆ ಒಂದು ಮೀಟರ್ ಗಿಂತ ಹೆಚ್ಚು ದೈಹಿಕ ಅಂತರವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಭೌತಿಕ ಬೇಲಿಯನ್ನು ನಿರ್ಮಿಸುವುದು.

3.4. ಶೌಚಾಲಯಗಳು ಮತ್ತಯ ಕೈತ್ತೊಳೆಯುವ ತೊಟ್ಟಿಗಳ ಬಳಿ ದ್ರವರೂಪದ ಸೋಪು ಮತ್ತು ನೀರಿನ ವ್ಯವಸ್ಥೆ ಮಾಡಬೇಕು.

3.5 ಸಾರ್ವಜನಿಕ ಸ್ಥಳದಲ್ಲಿ ಉಗುಳುವುದನ್ನು ಕಡ್ಡಾಯವಾಗಿ ನಿಷೇಧಿಸಬೇಕು.

3.6 ಆಡಳಿತ ಮಂಡಳಿಯ ವತಿಯಿಂದ ತರಬೇತಿ ಮತ್ತು ಐಇಸಿ ಚಟುವಟಿಕೆಗಳ ಮುಖೇನ ಸಿಬ್ಬಂದಿಗಳು ಮತ್ತು ಸಂದರ್ಶಕರಿಗೆ ಕೋವಿಡ್-19 ರ ಕುರಿತಾಗಿ ಕಾಲಕಾಲಕ್ಕೆ ಜಾಗೃತಿ ಮೂಡಿಸಬೇಕು.

3.7 ಕೋವಿಡ್-19 ಕ್ಕೆ ಸಂಬಂಧಿಸಿದಂತೆ ಮಾಡಬಹುದಾದ ಹಾಗೂ ಮಾಡಬಾರದ ಚಟುವಟಿಕೆಗಳ ಬಗ್ಗೆಗಿನ ಮಾಹಿತಿಯನ್ನು ಸೂಕ್ತವಾದ ಸ್ಥಳದಲ್ಲಿ ಬಿತ್ತರಗೊಳಿಸಬೇಕು.

**4. ಸಂದರ್ಶಕರು ಮತ್ತು ಸಿಬ್ಬಂದಿಗಳ ಜವಾಬ್ದಾರಿಗಳು:**

4.1 ಸಂದರ್ಶಕರು ಮತ್ತು ಸಿಬ್ಬಂದಿಗಳು ಆಗಾಗ್ಗೆ ಕೈಯನ್ನು ಸೋಪು ಅಥವಾ ನೀರಿನಿಂದ ಅಥವಾ ಮದ್ಯಸಾರ ಯುಕ್ತ ಸ್ಯಾನಿಟೈಸರ್ ನಿಂದ ತೊಳೆಯಬೇಕು.

4.2 ಸಂದರ್ಶಕರು/ಸಿಬ್ಬಂದಿಗಳು ಕೆಮ್ಮಿನ ಸಭ್ಯತೆಯನ್ನು ಕಾಯದ್ದುಕೊಳ್ಳುವುದು, ಕೆಮ್ಮುವಾಗ ಅಥವಾ ಸೀನುವಾಗ ಬಾಯಿ ಮತ್ತು ಮೂಗಿಗೆ ಎದುರಾಗಿ ಕಾಗದ ಅಥವಾ ಕರವಸ್ತ್ರವನ್ನು ಬಳಸುವುದು ಅತ್ಯಗತ್ಯ, ಬಳಸಿದ ಕಾಗದವನ್ನು ಕಸದ ತೊಟ್ಟಿಗೆ ಹಾಕಬೇಕು, ಕಾಗದ ಹಾಗೂ ಕರವಸ್ತ್ರವನ್ನು ಬಳಸದಿದ್ದರೆ ಬಾಯಿ ಮತ್ತು ಮೂಗನ್ನು ಮೊಣ ಕೈಯಿಂದ ಸುತ್ತುವರೆಯಬೇಕು.

4.3 ಯಾವುದೇ ರೀತಿಯ ಗುಂಪು ಚಟುವಟಿಕೆಗಳಿಗೆ ಅವಕಾಶ ನೀಡಬಾರದು, ಗುಂಪಿನಲ್ಲಿ ಒಂದು ಮೀಟರ್ ಗಿಂತ ಹೆಚ್ಚು ದೈಹಿಕ ಅಂತರವನ್ನು ಕಾಯ್ದುಕೊಳ್ಳಬೇಕು.

4.4 ಎಲ್ಲಾ ಸಿಬ್ಬಂದಿಗಳು ಮತ್ತು ಸಂದರ್ಶಕರು ಕಡ್ಡಾಯವಾಗಿ ಮುಖಗವಸನ್ನು ಧರಿಸಬೇಕು.



Scanned by CamScanner

5. ಕ್ಯಾಂಟೀನ್/ರೆಸ್ಟೋರೆಂಟ್/ಕೆಫೆಟೋರಿಯಾಗಳಲ್ಲಿ ಆಹಾರ ಶುಚಿತ್ವ:

**5.1.** ಅಡಿಗೆ ಮನೆಗೆ ಸಾಕಷ್ಟು ಗಾಳಿ ಮತ್ತು ಬೆಳಕಿನ ವ್ಯವಸ್ಥೆಯಿರಬೇಕು ಮತ್ತು ಸ್ವಚ್ಚತೆಯನ್ನು ನಿರ್ವಹಣೆ ಮಾಡಿರಬೇಕು, ಆಹಾರ ಪದಾರ್ಥಗಳ ತಯಾರಿಕೆಗೆ ಬಳಸುವ ತಾಜಾ ವಸ್ತುಗಳನ್ನು ಬಳಸುವ ಮುನ್ನ ಚೆನ್ನಾಗಿ ತೊಳೆಯಬೇಕು.

**5.2** ಆಹಾರ ಪದಾರ್ಥಗಳ ನಿರ್ವಹಣೆ ಮಾಡುವ ಎಲ್ಲಾ ಸಿಬ್ಬಂದಿಗಳು ಕಡ್ಡಾಯವಾಗಿ ಮುಖಗವಸು, ತಲೆಗೆ ಟೋಪಿ, ಮತ್ತು ಮೇಲ್ಪಟ್ಟೆಯನ್ನು ಧರಿಸಿರಬೇಕು, ಮುಖಗವಸು ಬಾಯಿ ಮತ್ತು ಮೂಗನ್ನು ಸುತ್ತುವರೆದಿರಬೇಕು.

**5.3** ಆಗಾಗ್ಗೆ ಕೈಯನ್ನು ಸೋಪು ಮತ್ತು ನೀರಿನಿಂದ ಅಥವಾ ಮದ್ಯಸಾರ ಯುಕ್ತ ಸ್ಯಾನಿಟೈಸರ್ ನಿಂದ ಕೈ ತೊಳೆಯಬೇಕು.

**5.4** ಆಹಾರ ಪದಾರ್ಥಗಳನ್ನು ನಿರ್ವಹಣೆ ಮಾಡುವವರು ಕೆಮ್ಮಿನ ಸಭ್ಯತೆಯನ್ನು ಕಾಯ್ದುಕೊಳ್ಳಬೇಕು.

**5.5** ದೈಹಿಕ ಅಂತರವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಊಟದ ವಿರಾಮ ಚದುರಿದ ಸಮಯವನ್ನು ನಿಗದಿಪಡಿಸಬೇಕು.

6. ಸ್ವಚ್ಛತಾ ಪ್ರಕ್ರಿಯೆಗಳು:

**6.1** ಪದೇ ಪದೇ ಮುಟ್ಟುವ ವಸ್ತುಗಳ ಮೇಲ್ಮೈಗಳು (ಉದಾ: ಸ್ವಿಚ್ಚುಗಳು, ಬಾಗಿಲ ಹಿಡಿಗಳು, ಫೋನ್ಗಳು ಇತ್ಯಾದಿ) ಮತ್ತು ಉಪಕರಣಗಳನ್ನು ಲೈಸಾಲ್ ಐಪಿ (ಶೇ.50 ರಷ್ಟು ಕ್ರೆಸಾಲ್ ಮತ್ತು ಶೇ.50 ರಷ್ಟು ದ್ರವರೂಪದ ಸೋಪು) ಬಳಸಿ ಅಥವಾ ಶೇ.1 ರ ಪ್ರಮಾಣದ ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದಲ್ಲಿ (ಅನುಬಂಧ-2 ರಲ್ಲಿ ದ್ರಾವಣದ ಸಿದ್ಧಪಡಿಸುವಿಕೆಯ ವಿಧಾನವನ್ನು ವಿವರಿಸಲಾಗಿದೆ) ಪ್ರತಿ ದಿನ ಮತ್ತು ಧೂಳು ಕುಳಿತ ಪ್ರತಿ ಸಂಧರ್ಭದಲ್ಲಿ ಸೋಂಕುನಿವಾರಣೆ ಮಾಡುವುದು.

**6.2** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ಮಾರ್ಗಸೂಚಿಗಳಂತೆ ಪ್ರತಿ ದಿನ ವಸತಿ ಗೃಹಗಳು ಮತ್ತು ಶೌಚಾಲಯ/ಮೂತ್ರಾಲಯಗಳನ್ನು ಸೋಂಕುನಿವಾರಣೆ ಮಾಡುವುದು. ವಿವರಗಳು ಕೆಳಕಂಡ ಲಿಂಕ್ ನಲ್ಲಿ ಲಭ್ಯವಿದೆ. https://www.mohfw.gov.in/pdf/Guidelinesondisinfectionofcommonpublicplacesincludingoffices.pdf

**6.3** ಪ್ರತಿ ದಿನ ಸಂಜೆ ಎಲ್ಲಾ ವಾಹನಗಳನ್ನು ಶೇ.1 ರ ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದಲ್ಲಿ ಸೋಂಕು ನಿವಾರಣೆ ಮಾಡುವುದು.


ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಸರ್ಕಾರಿ ಆದೇಶಗಳು/ಮಾರ್ಗಸೂಚಿಗಳು/ಸುತ್ತೋಲೆಗಳು/ಪ್ರಮಾಣಿಕೃತ ಮಾರ್ಗದರ್ಶಿ ಪ್ರಕ್ರಿಯೆಗಳು ಅನ್ವಯವಾಗುತ್ತವೆ.

**ಆಯುಕ್ತರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**



Scanned by CamScanner

**Annexure 1: Hand hygiene**



Annexure 2: Guidelines for Preparation of 1% sodium hypochlorite solution and Lysol

| Product | Available chlorine | 1percent |
|---|---|---|
| Sodium hypochlorite – liquid bleach | 3.5% | 1-part bleach to 2.5 parts water |
| Sodium hypochlorite - liquid | 5% | 1-part bleach to 4 parts water |
| NaDCC (sodium dichloroisocyanurate) powder | 60% | 17 grams to 1-liter water |
| NaDCC (1.5 g/ tablet) - tablets | 60% | 11 tablets to 1-liter water |
| Chloramine - powder | 25% | 80 g to 1-liter water |
| Bleaching powder | 70% | 7g g to 1-liter water |
| Lysol for disinfection<br>Lysol IP (50% Cresol and 50% Liquid soap) | | 2.5% Lysol (1 litre of Lysol in 19 litres of water) |
| Any other | As per manufacturer's Instructions | |

**For COVID related queries please contact:**

Helpline numbers 9745697456, 080-46848600, 080-66692000 & 14410

https://covid19.karnataka.gov.in/

Download Aarogya setu and Apthamitra apps from below link

https://covid19.karnataka.gov.in/new-page/Mobile%20Applications/en

For training videos please visit Jagruti Karnataka

https://www.youtube.com/channel/UC-iJ_NNw89m8_OocGo1Zfcg



Scanned by CamScanner

**ಕರ್ನಾಟಕ ಸರ್ಕಾರ**

ಸಂಖ್ಯೆ: ಅಪಜೀ 44 ಎಫ್‌ಪಿಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 06-06-2020

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಇವರಿಗೆ,
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು),
ಅರಣ್ಯ ಭವನ, 18ನೇ ಅಡ್ಡ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು

ಮಾನ್ಯರೆ,

ವಿಷಯ: ಕೋವಿಡ್-19ರ ನಿಯಂತ್ರಣ ಹಿನ್ನೆಲೆಯಲ್ಲಿ ವೀಕ್ಷಕರ ವೀಕ್ಷಣೆಗೆ ಮುಚ್ಚಲ್ಪಟ್ಟಿರುವ ಕರ್ನಾಟಕ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ಮೃಗಾಲಯಗಳನ್ನು ಸಾರ್ವಜನಿಕರ ವೀಕ್ಷಣೆಗೆ ಅನುಮತಿಸುವ ಬಗ್ಗೆ.

ಉಲ್ಲೇಖ: 1) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ, ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು ಇವರ ಕಛೇರಿ ಪತ್ರ ದಿನಾಂಕ: 13-05-2020 ಮತ್ತು 20-05-2020

2) Government of India, Ministry of Health & Family Welfare O.M.No. F.No.Z.28015/19/2020-EMR (Pt.), Dated: 04-06-2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ ಕಡೆಗೆ ಗಮನ ಸೆಳೆಯಲಾಗಿದೆ. ಕರ್ನಾಟಕ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ 09 ಮೃಗಾಲಯಗಳನ್ನು ಕೋವಿಡ್-19ರ ನಿಯಂತ್ರಣ ಹಿನ್ನೆಲೆಯಲ್ಲಿ ಸಾರ್ವಜನಿಕರ ವೀಕ್ಷಣೆಗೆ ಮುಚ್ಚಲಾಗಿದ್ದು, ಇವುಗಳನ್ನು ಸಾರ್ವಜನಿಕರ ವೀಕ್ಷಣೆಗೆ ತೆರೆಯುವ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.

ಕರ್ನಾಟಕ ರಾಜ್ಯದಲ್ಲಿನ ಜೈವಿಕ ಉದ್ಯಾನವನಗಳು, ಮೃಗಾಲಯಗಳು, ಪಕ್ಷಿಧಾಮಗಳು ಮತ್ತು ರಾಷ್ಟ್ರೀಯ ಉದ್ಯಾನವನಗಳನ್ನು ಸಾರ್ವಜನಿಕರ ವೀಕ್ಷಣೆಗೆ ಕೋವಿಡ್-19 ನಿಯಂತ್ರಣ ಮಾರ್ಗಸೂಚಿಯ ಎಲ್ಲಾ ಸೂಚನೆಗಳನ್ನು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಕಾಲಕಾಲಕ್ಕೆ ನೀಡುವ ಮಾರ್ಗಸೂಚಿ/ಎಸ್.ಓ.ಪಿ.ಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತುಗಳೊಂದಿಗೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪರಿಣಿತರ ಸಮಿತಿಯು ಪರಿಶೋಧಿಸಿ ಅಂತಿಮಗೊಳಿಸಿರುವ ಮಾರ್ಗಸೂಚಿಗಳನ್ನು (ಪ್ರತಿ ಲಗತ್ತಿಸಿದೆ) ಪಾಲಿಸುವ ಷರತ್ತಿಗೊಳಪಟ್ಟು ಸಾರ್ವಜನಿಕರ ವೀಕ್ಷಣೆಗೆ ದಿನಾಂಕ:08-06-2020ರಿಂದ ತೆರೆಯಲು ಅನುಮತಿ ನೀಡಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ನಿಮ್ಮ ನಂಬುಗೆಯ,

(ಗಾಯತ್ರಿ .ಎಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
(ಅರಣ್ಯ-ಎ)

**ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ**

1) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
2) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ, ಕರ್ನಾಟಕ ಮೃಗಾಲಯ ಪ್ರಾಧಿಕಾರ, ಶ್ರೀ ಚಾಮರಾಜೇಂದ್ರ ಮೃಗಾಲಯ ಆವರಣ, ಮೈಸೂರು-570 010.

Scanned by CamScanne